


### ನಗ್ನ ಗೊಂಡ ಐಪಿಎಲ್!

ಐಪಿಎಲ್ ಬಗ್ಗೆ ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದರೂ ಪೂರ್ಣ ವಿವರ ತಿಳಿದಿರಲಿಲ್ಲ. ಕೆ. ಓಂಕಾರ ಮೂರ್ತಿಯವರ ಲೇಖನ 'ಭೂಗತ ಕ್ರಿಕೆಟ್' ಸ್ವಾರಸ್ಯಮಯವಾಗಿ ಪೂರ್ಣ ವಿವರ ಬಿಚ್ಚಿಟ್ಟಿತು.

–ತರಂಗಿಣಿ, ತುಮಕೂರು/
ಪಿ.ಗೋವಿಂದರಾಜ್, ಶಿವಮೊಗ್ಗ/
ಡಿ.ಎಸ್.ಪಂಕಜ ಸುಬ್ರಮಣ್ಯಂ/
ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಸ್ವರೂಪ ಮತ್ತು ಸೂಪ!

'ಭೂಗತ ಕ್ರಿಕೆಟ್' 'ಭೂಗತ' ಶಬ್ದದ ನಡುವಣ ಅಕ್ಷರ 'ಗ' ತೆಗೆದರೆ, 'ಕ್ರಿ' ಕೆಟ್ಟಾದ ಇಂದಿನ ಸ್ವರೂಪ ಸುಸ್ಪಷ್ಟ! (ಅದಕ್ಕೆ 'ಚೀಯರ್ ಗರ್ಲ್ಸ್' ಮೋಹಿನಿಯರ ಧೂಪ ಬೇರೆ)

–ಸಿಪಿಕೆ, ಮೈಸೂರು

### ವಾಕಿಂಗ್ ಉಪಯುಕ್ತ ಸಲಹೆ

ವ್ಯಕ್ತಿಯ ದೈಹಿಕ, ಮಾನಸಿಕ ಆರೋಗ್ಯ ಹಾಗೂ ದೇಹದ ಸಮತೋಲನ ಕಾಪಾಡುವ ವಾಕಿಂಗ್ ಬಗೆಗೆ ಉಪಯುಕ್ತ ಸಲಹೆಗಳು 'ನೀವೂ ವಾಕಿಂಗ್ ಮಾಡ್ತಿದೀರಾ....' ಲೇಖನದಲ್ಲಿ ಮೂಡಿಬಂದಿವೆ.

–ವಿಭಾ ಮುರಳೀಧರ್, ತುಮಕೂರು

### ಕಳಿಂಗದಲ್ಲಿ ಆದಿವಾಸಿಗಳ ಮುಖ

'ಕಳಿಂಗದಲ್ಲಿ ಕಂಡ ಮುಖಗಳು!' ಬಿ.ಎಂ. ಹನೀಫ್ ಪ್ರವಾಸ ಲೇಖನ ಸೊಗಸಾಗಿದೆ. 'ಕಳಿಂಗ' ಎಂಬ ಪದ ಚಿರಪರಿಚಿತವಾಗಿದ್ದರೂ ಅಲ್ಲಿರುವ ಈ ವಿಭಿನ್ನ ಸಂಸ್ಕೃತಿಯ ಬಗ್ಗೆ, ಆದಿವಾಸಿ ಜನರ ಬಗ್ಗೆ ಮಾಹಿತಿಯೇ ತಿಳಿದಿರಲಿಲ್ಲ.

–ಕಿರಣ್ ಪ್ರಸಾದ್ ರಾಜನಹಳ್ಳಿ, ಬೆಂಗಳೂರು/
–ಎಚ್.ಆನಂದಕುಮಾರ್, ಚಿತ್ರದುರ್ಗ

### ಶಿಕ್ಷಣದಲ್ಲಿ ಅನನ್ಯ ಕ್ರಾಂತಿ

ಡಾ.ಅಚ್ಯುತ ಸಮಂತ ನೇತೃತ್ವದ ಕಳಿಂಗ ವಿಶ್ವವಿದ್ಯಾಲಯ ಆದಿವಾಸಿಗಳಿಗೆ ಶಿಕ್ಷಣ ನೀಡುವ ನಿಟ್ಟಿನಲ್ಲಿ ಅನನ್ಯ ಕೆಲಸ ಮಾಡಿದೆ. ಆ ತಾಂತ್ರಿಕ ವಿವಿಗೆ ಮಾನ್ಯತೆ ನೀಡುವ ರಾಷ್ಟ್ರೀಯ ಮಂಡಳಿಯಲ್ಲಿ ನಾನು ಸದಸ್ಯನಾಗಿದ್ದು, ಭುವನೇಶ್ವರಕ್ಕೆ ಭೇಟಿ ನೀಡಿ ಅವರ ಕಾರ್ಯಕ್ಷಮತೆಯನ್ನು ವೀಕ್ಷಿಸಿದ್ದೆ. ನೀವು ಬರೆದಿರುವುದು ಸರಿಯಾಗಿದೆ.

– ಡಾ.ಶಾಂತಕುಮಾರ್, ಮೈಸೂರು

### ಟಿಪ್ಪು ನಮ್ಮ ಹೆಮ್ಮೆ, ಆದರೆ ರಜೆ ಬೇಡ

ಟಿ.ಪಿ. ಪ್ರಸನ್ನಕುಮಾರರ 'ಟಿಪ್ಪುವಿನ ಕೊನೆಯ ಊಟ' ಕುತೂಹಲಕಾರಿ. ಟಿಪ್ಪು ನಿಜಕ್ಕೂ ಒಬ್ಬ ದೇಶಪ್ರೇಮಿ, ಅವನಿಂದ ರಾಜ್ಯಕ್ಕೆ ಹೆಮ್ಮೆ ಎಂಬುದು ನಿಜ. ಆದರೆ ಟಿಪ್ಪುವಿನ ಗೌರವಾರ್ಥ ರಜಾ ದಿನ ಎಂದು ಪರಿಗಣಿಸಬೇಕೆಂಬ ಲೇಖಕರ ಮಾತು ಅಸಮಂಜಸ. ಈಗಾಗಲೇ ಬಹಳಷ್ಟು ರಜೆ ದಿನಗಳಿರುವಾಗ ಇದು ಸರಿಯಲ್ಲ.

–ಬಿಲ್ಲೇಶ್ವರ ಅಚ್ಚು, ಹುಂಚ

### ಏಕಪಕ್ಷೀಯ ಲೇಖನ

ಕೊಡಗು ಭಾರತ ದೇಶದ ಭಾಗವಾಗದೇ ಇದ್ದಿದ್ದರೆ, ಕನ್ನಡವು ಕನ್ನಡಿಗರ ಭಾಷೆ ಆಗದೇ ಇದ್ದಿದ್ದರೆ ಮೇ.4 ಟಿಪ್ಪು ಸಲುವಾಗಿ ಸಂಭ್ರಮದ ರಜಾ ದಿನ ಆಗಬಹುದಿತ್ತು! ಇತಿಹಾಸದ ಪೂರ್ಣ ತಿಳುವಳಿಕೆ ಇಲ್ಲದ ಏಕಪಕ್ಷೀಯ ಲೇಖನ ಪ್ರಕಟಿಸಬೇಡಿ.

–ನರೇಂದ್ರ ಸಿರಕಜೆ, ಮೈಸೂರು

### ಮಾದರಿಯಾದ ಅರ್ಧ ಮನುಷ್ಯ

ಅರ್ಧ ಮನುಷ್ಯನ ಅದ್ಭುತ'– (ಕಿರಣ್‌ಪ್ರಸಾದ್ ರಾಜನಹಳ್ಳಿ) ಆರೋಗ್ಯವಾಗಿದ್ದೂ ಬದುಕಲಾರದೇ ಏದುಸಿರು ಬಿಡುತ್ತಿರುವವರಿಗೆ ಪೆಂಗ್ ಶುಲಿನ್‌ನ ಇಚ್ಛಾಶಕ್ತಿ, ಬದುಕುವ ಛಲ ದಾರಿದೀಪ.

–ರಾಜಾಗ್ರಜ, ದೊಡ್ಡಬಳ್ಳಾಪುರ/ ಕೆ.ಎಸ್.ಸವಿತ, ಬೆಂಗಳೂರು

### ಪುನರಾವರ್ತನೆ

ಪುಟ 14–15ರ ನಗೆಹೊನಲಿನಲ್ಲಿ ಚಿತ್ರಗಳು ಪುನರಾವರ್ತನೆಯಾಗಿವೆ.

– ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

ಹೌದು, ತಪ್ಪಾಗಿದೆ. – ಸಂ.

